# ಕಣ್ಮರೆಯಾದ ಕೊಳಗ

ಹಿಂದೆ ಹಳ್ಳಿಗಳಲ್ಲಿ ರೈತರು ದವಸ ಧಾನ್ಯಗಳನ್ನು ಅಳತೆ ಮಾಡಲು ಚಟಾಕು, ಪಾವು, ಸೇರು ಹಾಗೂ ಕೊಳಗ ಮುಂತಾದವುಗಳನ್ನು ಅಳತೆ ಮಾಪನವಾಗಿ ಬಳಸುತ್ತಿದ್ದರು. ಮಿಲಿ ಲೀಟರ್, ಲೀಟರ್, ಕ್ವಿಂಟಾಲ್ ಬಂದ ಮೇಲೆ ಹಳೆ ಮಾದರಿಯ ಅಳತೆ ಮಾಪನಗಳು ಕಣ್ಮರೆಯಾದವು. ಇತ್ತೀಚೆಗೆ ಮಂಡ್ಯದಲ್ಲಿ ನಡೆದ ನಮ್ಮ ಸಂಬಂಧಿಕರ ವಿವಾಹ ಸಂದರ್ಭದಲ್ಲಿ ಶಾಸ್ತ್ರ ಮಾಡಲು ಹಳ್ಳಿಯಿಂದ ತಂದ ಈ ಕೊಳಗ ಗಮನ ಸೆಳೆಯಿತು.

**-ಪ್ರೊ.ಸಿ.ಸಿದ್ದರಾಜು ಆಲಕೆರೆ, ಮಂಡ್ಯ**





# ಕೈ ಬಿಂದಿಗೆ

ಚಿತ್ರದಲ್ಲಿ ಕಾಣುತ್ತಿರುವುದು ಹಿಂದಿನ ಕಾಲದಲ್ಲಿ ಹಂಡೆಯಿಂದ ಬಿಸಿ ನೀರನ್ನು ಎತ್ತಲು ಬಳಸುತ್ತಿದ್ದ ಕೈ ಬಿಂದಿಗೆ. ಇದು 60–70 ವರ್ಷ ಹಿಂದಿನದ್ದಾಗಿದ್ದು ಪುರಾತನ ಕಾಲದಲ್ಲಿ ಪ್ಲಾಸ್ಟಿಕ್ ಮಗ್‌ಗಳ ಬದಲಾಗಿ ಈ ಕೈ ಬಿಂದಿಗೆಗಳನ್ನು ಬಳಸುತ್ತಿದ್ದರು. ಈಗ ಇದರ ಬಳಕೆಯು ಇಲ್ಲದಿರುವುದರಿಂದ ಯಾರಿಗೂ ಇದರ ಕುರಿತಾಗಿ ಯಾವುದೇ ತರಹದ ಮಾಹಿತಿಯಿಲ್ಲ.

**-ಪಲ್ಲವಿ ಕೋಂಬ್ರಾಜೆ, ಪುತ್ತೂರು**

# ವಿಚಿತ್ರ ಹೊಗೆ ಚಿತ್ರ

ಚಿತ್ರದಲ್ಲಿ ಇರುವುದು 'ಹೊಗೆ ಚಿತ್ರ'. ಇದು ಚಿತ್ರ ಕಲಾ ಪ್ರಕಾರಗಳಲ್ಲಿ ವಿಭಿನ್ನ ಮತ್ತು ವಿನೂತನ ಕಲೆ. ಈ ಕಲಾ ಪ್ರಕಾರವನ್ನು ಬಲ್ಲವರು ಧಾರವಾಡದ ಧಾನೇಶ್ವರಿ ನಗರದ ವಿದ್ಯಾಗಿರಿಯ ಮಂಜುನಾಥ ಬಾಲಗೇರಿ. ಚಿತ್ರಕಲೆ ಜ್ಞಾನ ಉಳ್ಳವರು ಈ ಕಲೆಯನ್ನು ಬೇಗನೆ ಕಲಿಯ ಬಹುದೆನ್ನುತ್ತಾರೆ ಅವರು. ಮೊದಲು ಚಿಮಣಿ ದೀಪ ಅಥವ ಮೇಣದ ಬತ್ತಿ ಜ್ವಾಲೆಯಿಂದ ಹೊರಡುವ ಹೊಗೆಯಿಂದ ಬಿಳಿ ಕಾಗದವನ್ನು ಕಪ್ಪಾಗಿಸಬೇಕು. ಮಸಿಯಿಂದ ಕಪ್ಪುಗಟ್ಟಿದ ಪೇಪರ್ ಮೇಲೆ ಕೈಬೆರಳು, ಕಸಬರಿಗೆ ಕಡ್ಡಿ, ಕುಂಚ ಅಥವ ಅನುಕೂಲಕರ ಸಾಧನಗಳನ್ನು ಬಳಸಿಕೊಂಡು ಚಿತ್ರ ರಚಿಸುತ್ತೆವೆ ಎಂದು ಮಂಜುನಾಥ ಮಾಹಿತಿ ನೀಡುತ್ತಾರೆ. ಅವರು ಸಾಹಿತಿಗಳ, ಸಾಧು ಸಂತರ, ಗಣ್ಯರ ಚಿತ್ರಗಳನ್ನು ಹೊಗೆಯಲ್ಲಿ ಮೂಡಿಸಿದ್ದಾರೆ.

**-ತಾರಾನಾಥ್ ಮೇಸ್ತ ಶಿರೂರು, ಉಡುಪಿ**

